# ಮರೆಯಾದಳೇ ಮಹಾತಾಯಿ ಬೆಲ್ದಂಡ

ಈಚೆಗೆ ಮಲೆಮಹದೇಶ್ವರ ವನ್ಯಧಾಮದಲ್ಲಿ ವಿಷಪ್ರಾಷನದಿಂದಾಗಿ ಐದು ಹುಲಿಗಳು ದಾರುಣವಾಗಿ ಸಾವನ್ನಪ್ಪಿದ ಘಟನೆ ನಡೆದಿದೆ. ಹಲವು ರಾಜ್ಯಗಳಲ್ಲಿ ಕಾಡಿನಿಂದ ಹುಲಿಗಳು ಏಕಾಏಕಿ ಕಣ್ಮರೆಯಾಗುವ ಸಂಗತಿಗಳು ಜರುಗುತ್ತಲೇ ಇವೆ. ಉತ್ತರ ಪ್ರದೇಶದ 'ಬೆಲ್ದಂಡ' ಹುಲಿ ಕೂಡ ಅಪಾಯದ ಅಂಚಿನಲ್ಲಿದೆ. ಜುಲೈ 29ರ ವಿಶ್ವ ಹುಲಿ ದಿನ ನೆಪದಲ್ಲಿ ಹುಲಿ ಸಂರಕ್ಷಣೆ ಕುರಿತ ಚಿಂತನೆಯೊಂದು ಇಲ್ಲಿದೆ.

■ ಗುರುರಾಜ್ ಎಸ್. ದಾವಣಗೆರೆ

ಚಿತ್ರಗಳು: ಸಿದ್ಧಾರ್ಥ್ ಸಿಂಗ್



ಈಕೆಯ ವಯಸ್ಸು ಹದಿಮೂರು! ಆದರೂ ಹದಿಮೂರು ಮಕ್ಕಳ ತಾಯಿ. ಈ ಮಕ್ಕಳ ಅಪ್ಪ ಆಗೊಮ್ಮೆ ಈಗೊಮ್ಮೆ ಮಕ್ಕಳ ಮೈದಡವಿದರೆ ಅದೇ ಭಾಗ್ಯ. ಮಿಲನಕ್ರಿಯೆಯಲ್ಲಿ ಭಾಗವಹಿಸಿ ನಂತರ ನಿನ್ನ ಸುತ್ತ ಕಾವಲಿರುವುದಷ್ಟೇ ನನ್ನ ಜವಾಬ್ದಾರಿ, ಮುಂದಿನದೆಲ್ಲ ನಿನ್ನದೇ ಎನ್ನುವ ಜೀವನಶೈಲಿ ಆತನದ್ದು. ಮಕ್ಕಳನ್ನು ಸ್ವಲ್ಪ ದೊಡ್ಡವರಾಗುವವರೆಗೆ ಬೆಳೆಸುವುದು, ಕಾಪಾಡುವುದು ಜೀವನಕ್ರಮ ಕಲಿಸುವುದು ತಾಯಿಯ ಜವಾಬ್ದಾರಿ. ಸಂಗಾತಿಯಿಂದ ದೂರವಿದ್ದು ಸಹಜ ಜೀವನ ದುಸ್ತರವಾದಾಗ ಸಂಸಾರ ರಕ್ಷಣೆಗಾಗಿ ಈಕೆ ಸಖನನ್ನೇ ಹೋಲುವ ಇನ್ನೊಬ್ಬನೊಟ್ಟಿಗೆ ಸಂಸಾರ ನಡೆಸಿದ್ದೂ ಇದೆ.

ಹದಿಮೂರು ಮಕ್ಕಳಿಗೂ ಒಬ್ಬನೇ ಅಪ್ಪ ಅಲ್ಲ. ತಂದೆ ಯಾರು ಎಂಬುದಕ್ಕಿಂತ ಹಡೆದ ಮಕ್ಕಳನ್ನು ಜತನದಿಂದ ಕಾಯುವುದು, ನೋಡಿಕೊಳ್ಳುವುದೇ ಇವಳ ಚಿಂತೆ. ಎಲ್ಲ ತಾಯಂದಿರ ಕೆಲಸವೇ ಅದು, ಇವಳದೇನು ಹೊಸದಾ? ಎಂದು ಕೇಳುತ್ತಿದ್ದೀರಾ?

ಇವಳು ಅಂತಿಂಥ ಹೆಣ್ಣಲ್ಲ. ಇವಳೊಬ್ಬಳು ಹೆಣ್ಣು ಹುಲಿ! ಹೆಸರು ಬೆಲ್ದಂಡ. ಉತ್ತರ ಪ್ರದೇಶ ರಾಜ್ಯದ ದುದ್ವ ರಾಷ್ಟ್ರೀಯ ಉದ್ಯಾನವನದ ಕಿಶನ್ಪುರ್ ವನ್ಯಜೀವಿ ವಲಯದ ಹುಲಿ. ನಡುವಯಸ್ಸು ಕಳೆದಿರುವ ಬೆಲ್ದಂಡ. ಹಡೆದ ಎಲ್ಲ ಮರಿಗಳೂ ಬದುಕಿದ್ದರೆ ಸಂಖ್ಯೆ 20 ದಾಟುತ್ತಿತ್ತು. ಕಳೆದ 13 ವರ್ಷಗಳಿಂದ ಈ ಅರಣ್ಯದ ಉಳಿದ ಹೆಣ್ಣು ಹುಲಿಗಳಿಗೆ ಹೋರಾಟಗಾರ್ತಿಯಂತೆ ಕಾಣಿಸುತ್ತಾಳೆ ಬೆಲ್ದಂಡ.

ಬೆಲ್ದಂಡ ಜಗತ್ತಿಗೆ ಪರಿಚಯವಾದದ್ದು 2019ರಲ್ಲಿ. ಐದು ಪುಟ್ಟ ಮರಿಗಳೊಂದಿಗೆ ಹೆಜ್ಜೆ ಹಾಕುತ್ತಿದ್ದ ಬೆಲ್ದಂಡಳನ್ನು ನೋಡಿ ಅಭಯಾರಣ್ಯದ ಅಧಿಕಾರಿಗಳು ಮತ್ತು ವನ್ಯಜೀವಿತಜ್ಞರು ಮಾತಿಲ್ಲದವರಾಗಿದ್ದರು. ಹುಲಿ ಕುಟುಂಬದ ಈ ಚಿತ್ರ ವೈರಲ್ ಆಗಿತ್ತು.

## ಎದೆ ನಡುಗಿಸಿದ ಕ್ರೌರ್ಯ

ಈ ಖುಷಿ ಹೆಚ್ಚು ಕಾಲ ಉಳಿಯಲಿಲ್ಲ. ಎರಡು ಮರಿಗಳು ಕಣ್ಣೆದುರೇ ಕಣ್ಮುಚ್ಚಿದವು. ಉಳಿದ ಮೂರು ವಿಶಾಲ ಅರಣ್ಯದಲ್ಲಿ ಕಳೆದುಹೋದವು. ಮರು ವರ್ಷ ಬೆಲ್ದಂಡ ಮತ್ತೆ ನಾಲ್ಕು ಮುದ್ದಾದ ಹುಲಿ ಮರಿಗಳನ್ನು ಹೆತ್ತಳು! ಬೆಲ್ದಂಡಳ ಹೊಸ ಸಖ ಚಲ್ತುವ ಈ ಮರಿಗಳ ಅಪ್ಪನಾಗಿದ್ದ.

ಥಂಡರ್ ಎಂಬ ಹೆಸರಿನ ಗಂಡು ಹುಲಿ, ಮರಿಗಳ ಮೇಲೆ ಆಕ್ರಮಣ ಮಾಡಿ ಎರಡನ್ನು ಕೊಂದು ಹಾಕಿತ್ತು. ಕ್ಯಾಮೆರಾ ಟ್ರ್ಯಾಪ್ (ಕಾಡಿನಲ್ಲಿ ವನ್ಯಜೀವಿಗಳ ಚಲನವಲನದ ಮೇಲೆ ಇನ್ಫ್ರಾರೆಡ್ ಕ್ಯಾಮೆರಾ ಮೂಲಕ ನಿಗಾ ಇಡುವ ವ್ಯವಸ್ಥೆ) ವಿಧಾನದಲ್ಲಿ ಈ ದೃಶ್ಯ ಸೆರೆಯಾಗಿತ್ತು. ಸತ್ತ ಮರಿಗಳ ಕಳೇಬರದ ಬಳಿ ಕುಳಿತು ಅವುಗಳ ಮೈ ನೆಕ್ಕುತ್ತಾ ಬೆಳಗಿನಿಂದ ಸಂಜೆಯವರೆಗೆ ಆ ಜಾಗದಿಂದ ಒಂದಿಂಚೂ ಕದಲಿರಲಿಲ್ಲ. ಈ ವಿಡಿಯೊ ತುಣುಕು ಇಡೀ ಪ್ರಪಂಚದ ಗಮನಸೆಳೆಯಿತು.

ಇದಾದ ತಕ್ಷಣ ಕಿಶನ್ಪುರ್ ಅರಣ್ಯ ವಲಯಕ್ಕೆ ಸಾರ್ವಜನಿಕರ ಪ್ರವಾಸ, ಪ್ರವೇಶ ಎರಡನ್ನು ಸ್ಥಗಿತಗೊಳಿಸಲಾಯಿತು. ಉಳಿದೆರಡು ಮರಿಗಳನ್ನು ಕಾಪಾಡಲು ಅರಣ್ಯ ಇಲಾಖೆಯು ತಾಯಿ ಮರಿಗಳಿರುವ ಪ್ರದೇಶವನ್ನು ಕಾವಲು ಕಾಯಿತು. ಬೆಲ್ದಂಡ ಮತ್ತು ಮರಿಗಳು ಇರುವಲ್ಲಿಯೇ ನೀರಿನ ಹೊಂಡ ನಿರ್ಮಿಸಿತು. ಇಲಾಖೆಯ ಪ್ರಯತ್ನದ ಫಲವಾಗಿ ಬದುಕುಳಿದು ಎರಡೂ ಮರಿಗಳು ವಯಸ್ಸಿಗೆ ಬಂದಿವೆ. 2023–24ರಲ್ಲಿ ಮತ್ತೆ ನಾಲ್ಕು ಮರಿಗಳಿಗೆ ಜನ್ಮ ನೀಡಿದ ಬೆಲ್ದಂಡ 'ಮಹಾತಾಯಿ'ಯ ಪಟ್ಟ ಪಡೆದಳು. ಇವುಗಳಲ್ಲಿ ಎರಡು ಬದುಕಿ ಉಳಿದಿವೆ ಮತ್ತು ಕಿಶೋರಾವಸ್ಥೆಯನ್ನು ದಾಟಿ ಯೌವನಕ್ಕೆ ಕಾಲಿಡುತ್ತಿವೆ. ಬೆಲ್ದಂಡ ಹಡೆದ ಒಟ್ಟು 13 ಹುಲಿಗಳಲ್ಲಿ ಐದು ಆರೋಗ್ಯದಿಂದ ಜೀವಿಸುತ್ತಿವೆ.

ಪಕ್ಕದ ರಣಥಂಬೋರ್ ಕಾಡಿನ 'ಮಚಲಿ' ಎಂಬ ಹುಲಿ 1999ರಿಂದ 2006ರ ಅವಧಿಯಲ್ಲಿ ಒಟ್ಟು ನಾಲ್ಕು ಹೆರಿಗೆಗಳಿಂದ 11 ಮರಿಗಳಿಗೆ ಜನ್ಮ ನೀಡಿ ದಾಖಲೆ ಮಾಡಿತ್ತು. 19 ವರ್ಷಗಳ ಸುದೀರ್ಘ ಜೀವಿತಾವಧಿಯಲ್ಲಿ ಉಳಿದದ್ದು 6 ಮರಿಗಳು ಮಾತ್ರ. ಬೆಲ್ದಂಡಳ ಕಥೆ ಇದಕ್ಕಿಂತ ತುಸು ಭಿನ್ನ.

## ಅಪ್ಪಟ ಹೋರಾಟದ ಕಿಚ್ಚು

ಹತ್ತು ವರ್ಷಗಳಿಂದಲೂ ಬೆಲ್ದಂಡಳನ್ನು ಗಮನಿಸುತ್ತಿರುವ ಮತ್ತು ಪ್ರಾರಂಭದಲ್ಲಿ ಅವಳ ಅಮ್ಮ ಮತ್ತು ಅಕ್ಕಂದಿರ ಜೊತೆ ಬೆಲ್ದಂಡಳನ್ನು ನೋಡಿರುವ ವನ್ಯಜೀವಿ